277

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಜವರಾಯಿಗೌಡ, ನಿವೃತ್ತ ಸಹಾಯಕ ಕೃಷಿ ನಿರ್ದೇಶಕರು, ಇವರಿಂದ ಸರ್ಕಾರಕ್ಕೆ ಬರಬೇಕಾದ ಹಣ ರೂ. 26,525/-ಗಳನ್ನು ಮನ್ನಾ ಮಾಡುವ ಬಗ್ಗೆ

**ಓದಲಾಗಿದೆ:**

1. ಕೃಷಿ ಆಯುಕ್ತರ ಪತ್ರ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-4/20/ಮೈಸೂರು 2005-06. ದಿನಾಂಕ: 16-07-2010 ಮತ್ತು 22-08-2011.

*********

**ಪ್ರಸ್ತಾವನೆ:**

ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಕೃಷಿ ಆಯುಕ್ತರ ಪತ್ರದಲ್ಲಿ ಶ್ರೀ ಜವರಾಯಿಗೌಡ, ನಿವೃತ್ತ ಸಹಾಯಕ ಕೃಷಿ ನಿರ್ದೇಶಕರು, ಇವರು ಸೇವೆಯಲ್ಲಿರುವಾಗ 1991-92 ನೇ ಸಾಲಿನಲ್ಲಿ ಸಮಗ್ರ ಅಕ್ಕಿ ಉತ್ಪಾದನಾ ಕಾರ್ಯಕ್ರಮದಡಿ ಮಾರ್ಗಸೂಚಿಗಳನ್ನು ಉಲ್ಲಂಘಿಸಿ, ಸರ್ಕಾರಕ್ಕೆ ರೂ. 26,525/-ಗಳ ನಷ್ಟ ಉಂಟು ಮಾಡಿರುವುದರಿಂದ ಸದರಿ ಮೊತ್ತವನ್ನು ಈಗಾಗಲೇ ಸದರಿ ಅಧಿಕಾರಿಗಳು ನಿವೃತ್ತರಾಗಿರುವುದರಿಂದ ಅವರ ಮೇಲೆ ಸಿವಿಲ್ ಮೊಕದ್ದಮೆ ಹೂಡಿ ವಸೂಲು ಮಾಡುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಶ್ರೀ ಜವರಾಯಿಗೌಡ, ನಿವೃತ್ತ ಸಹಾಯಕ ಕೃಷಿ ನಿರ್ದೇಶಕರು, ಅವರಿಂದ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಅವರ ವಿರುದ್ಧ ಸಕ್ಷಮ ನ್ಯಾಯಾಲಯದಲ್ಲಿ ಕರ್ನಾಟಕ ಕಂಡಕ್ಟ್ ಆಫ್ ಲಿಟಿಗೇಷನ್ ನಿಯಮ 1985ರ ನಿಯಮ 3ರಡಿಯಲ್ಲಿ ಸಿವಿಲ್ ಮೊಕದ್ದಮೆ ಹೂಡಿ ವಸೂಲು ಮಾಡುವ ಪ್ರಕ್ರಿಯೆಗೆ ಧೀರ್ಘ ಕಾಲಾವಧಿ ಹಿಡಿಯುವುದರಿಂದ ಹಾಗೂ ಸದರಿ ಪ್ರಕ್ರಿಯೆಗೆ ಮಾಡಬೇಕಾದ ವೆಚ್ಚ, ಅವರಿಂದ ವಸೂಲು ಮಾಡಬೇಕಾದ ಮೊತ್ತಕ್ಕಿಂತಲೂ ಅಧಿಕವಾಗುವ ಸಂಭವವಿರುವುದರಿಂದ ಅವರಿಂದ ನಷ್ಟವಾದ ಮೊತ್ತ ರೂ. 26,525/-ಗಳನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 1996. ದಿನಾಂಕ: 10-07-1996ರ ಕ್ರಮ ಸಂಖ್ಯೆ: 33ರನ್ವಯ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾದ ಅಧಿಕಾರದಂತೆ ಸದರಿ ಮೊತ್ತವನ್ನು ಮನ್ನಾಮಾಡಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 86 ಕೃಪರಿ 2010**
**ಬೆಂಗಳೂರು, ದಿನಾಂಕ: 26/04/2012.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದಾಗಿ ಸರ್ಕಾರವು ಶ್ರೀ ಜವರಾಯಿಗೌಡ, ನಿವೃತ್ತ ಸಹಾಯಕ ಕೃಷಿ ನಿರ್ದೇಶಕರು, ಇವರಿಂದ ಸರ್ಕಾರಕ್ಕೆ ಬರಬೇಕಾಗಿದ್ದ ಹಣ ರೂ. 26,525/-ಗಳನ್ನು ಮನ್ನಾ ಮಾಡಿ ಆದೇಶಿಸಲಾಗಿದೆ.

ಸದರಿ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 1996. ದಿನಾಂಕ: 10-07-1996ರನ್ವಯ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ.

26/4/12
(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.
3. ಜಂಟಿ ಕೃಷಿ ನಿರ್ದೇಶಕರು ಮೈಸೂರು.
4. ಸಂಬಂಧಿಸಿದ ಅಧಿಕಾರಿಗಳು (ಆಯುಕ್ತರು, ಕೃಷಿ ಇಲಾಖೆ ಮೂಲಕ).
5. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿ,
6. ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಸಹಾಯಕರು,
7. ಸರ್ಕಾರದ ಉಪ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಸಹಾಯಕರು,
8. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.